OS No. 151/2021 PW-1

<u>ದಿನಾಂಕ 13.01.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಕೆ ವಿ ವಕೀಲರಿಂದಃ</u>

10 ಲಕ್ಷ ಕೊಟ್ಟ ಚೆಕ್ಕಿನ ಸಂಖ್ಯೆ 440446 ಆಗಿರುತ್ತದೆ. ಸದರಿ ಚೆಕ್ಕು ಚಲಾವಣೆಯಾಗಿದೆ. ನಾನು ಕೊಟ್ಟ ಚೆಕ್ಕು ಅಮಾನ್ಯವಾಗಿರುತ್ತದೆ ಎಂದರೆ ಸುಳ್ಳು. ನನಗೆ ತೆಂಕನಹಳ್ಳಿ ಗ್ರಾಮದ ಶಿವಣ್ಣನ ಮಗ ನವೀನ್ ಕುಮಾರ್ ಗೊತ್ತಿದೆ. ಅವರು ನಮ್ಮ ಪಕ್ಕದ ಊರಿನವರು. ಅವರ ಜೊತೆ ನಾನು ಕ್ರಯದ ಕರಾರು ಮಾಡಿಕೊಂಡಿದ್ದೇನೆ. ಅವರ ಮೇಲೂ ನಾನು ದಾವಾ ಸಂಖ್ಯೆ 31/2022 ರಂತೆ ಸಲ್ಲಿಸಿರುತ್ತೇನೆಂದರೆ ನಿಜ. ಸದರಿ ದಾವೆಯಲ್ಲಿ 9 ಲಕ್ಷ ಮುಂಗಡ ಹಣ ಕೊಟ್ಟು 1 ಲಕ್ಷ ಬಾಕಿ ಹಣ ಕೊಡಬೇಕೆಂದು ದಾವೆ ಸಲ್ಲಿಸಿರುತ್ತೇನೆಂದರೆ ನಿಜ. ನಾನು ಬಡ್ಡಿ ವ್ಯವಹಾರ ಮಾಡಿಕೊಂಡು ಈ ರೀತಿ ಅನೇಕ ಪ್ರಕರಣಗಳನ್ನು ಹಾಕಿರುತ್ತೇನೆಂದರೆ ಸುಳ್ಳು. ಸಾಲದ ಭದ್ರತೆಗಾಗಿ ಪ್ರತಿವಾದಿಯವರು ನನ್ನ ಬಳಿ ಕ್ರಯದ ಕರಾರು ಮಾಡಿಕೊಂಡಿದ್ದರು ಎಂದರೆ ಸುಳ್ಳು.ಪ್ರತಿವಾದಿಯವರಿಗೆ ಮಾರಾಟ ಮಾಡುವ ಉದ್ದೇಶವಿರಲಿಲ್ಲ ಎಂದರೆ ಸುಳ್ಳು. ನಾನು ಹಣ ಕೊಡದೇ ಇರುವುದರಿಂದ ಕರಾರಿಗೆ ಬೆಲೆ ಇಲ್ಲ ಎಂದರೆ ಸುಳ್ಳು. ಪ್ರತಿವಾದಿಯವರು ಸಾಲ ಮತ್ತು ಬಡ್ಡಿಯನ್ನು ಕೊಡಲು ನನ್ನ ಬಳಿ ಬಂದಾಗ ನಾನು ತಿರಸ್ಕಾರ ಮಾಡಿರುತ್ತೇನೆಂದರೆ ಸುಳ್ಳು. ಬ್ಯಾಂಕ್ ಖಾತಾ ಉತ್ತಾರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿಯವರಿಗೆ ಕಿರುಕುಳ ಕೊಡುವ ಸಲುವಾಗಿ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**